ಇಂದು ದಿನಾಂಕಃ 07.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ನನ್ನ ಸಾಕ್ಷ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ರಿ.ಸ.ನಂ.60/5 ಎ 1, ರ ವಿಸ್ತೀರ್ಣ 5 ಎಕರೆ ಇರುತ್ತದೆ. ಅದರ ಚಕ್ಕಬಂದಿ ಎಂದರೆ ಉತ್ತರಕ್ಕೆ ನನಗೆ ಸೇರಿದ ಜಮೀನು, ದಕ್ಷಿಣಕ್ಕೆ ಹನುಮಂತಪ್ಪ ಬೋವಿ ರವರ ಜಮೀನು, ಪೂರ್ವಕ್ಕೆ ಬಂಡಿ ದಾರಿ ಹಾಗೂ ಪಶ್ಚಿಮಕ್ಕೆ ಪ್ರತಿವಾದಿಗೆ ಸೇರಿದ ಜಮೀನು ಇರುತ್ತದೆ. ಸದರಿ ಚಕ್ಕುಬಂದಿಯನ್ನು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ರಿ.ಸ.ನಂ.60/6 ಬಿ, ರ ವಿಸ್ತೀರ್ಣ 5 ಎಕರೆ ಇರುತ್ತದೆ. ಅದರ ಕ್ಷೇತ್ರ ಮತುತ ಚಕ್ಕುಬಂದಿಯನ್ನು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಹೇಳಿರುತ್ತೇನೆ ಆದರೆ ವಕೀಲರು ಬರೆದಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಯು ಸ್ವಾದೀನತೆಯನ್ನು ಪರಿಗಣಿಸಬೇಕಾದರೆ ಆ ವ್ಯಕ್ತಿ ತಾನು ಸ್ವಾದೀನದಲ್ಲಿರುವ ಸ್ವತ್ತಿನ ಅಕ್ಕ ಪಕ್ಕದಲ್ಲಿರುವ ಜಮೀನುಗಳ ಮಾಹಿತಿ ಹಾಗೂ ಚಕ್ಕುಬಂದಿಗಳನ್ನು ಹೇಳಿದರೇ ಮಾತ್ರ ಆತ ಸ್ವಾದೀನದಲ್ಲಿದ್ದಾನೆ ಎಂದು ಗ್ರಹಿಸಬೇಕು ಎಂದರೆ ಸಾಕ್ಷಿಯು ನಾನು ಸದರಿ ಸರ್ವೆನಂಬುರಗಳ ಚಕ್ಕುಬಂದಿಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ ಆದರೆ ಅವುಗಳ ಬಗ್ಗೆ ವಕೀಲರು ನಮೂದಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳನ್ನು ಈವರೆಗೂ ನೋಡೇ ಇಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಯರು ಶಿಕಾರಿಪುರದಲ್ಲಿರುವ ಆಸ್ತಿಗಳ ಬಗ್ಗೆ ಈ ಮೊದಲು ವಹಿವಾಟು ಮಾಡುತ್ತಿದ್ದರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಈ ದಾವೆಯಲ್ಲಿ ಪ್ರತಿವಾದಿ 2, 3, 5 ನೇ ಪ್ರತಿವಾದಿಯ ತಂದೆ ಹಾಗೂ 6 ನೇ ಪ್ರತಿವಾದಿಯ ಗಂಡ ಇವರ ಪರಿಚಯ ಇರುತ್ತದೆ ಇವರನ್ನು ಹೊರತುಪಡಿಸಿ ನನಗೆ ಯಾರ ಪರಿಚಯವು ಇರುವುದಿಲ್ಲ. ಭರಮಪ್ಪ ಎಂಬವರಿಗೆ ಇಬ್ಬರು ಹೆಂಡತಿಯರು ಇದಿದ್ದು, 2 ಮತ್ತು 3 ನೇ ಪ್ರತಿವಾದಿಯರು ಭರಮಪ್ಪ ರವರ ದೊಡ್ಡ ಹೆಂಡತಿಯ ಮಕ್ಕಳು ಎಂದರೆ ಸರಿ. ನಿಂಗಪ್ಪ ಎಂಬುವವರು 2 ನೇ ಹೆಂಡತಿಯ ಮಗ ಎಂದರೆ ಇರಬಹುದು. ವಾದಿಯು ನಿಂಗಪ್ಪ ರವರ ಸಹೋದರ ಎಂದರೆ ಇರಬಹುದು.

3. ರಿ.ಸ.ನಂ.60/5 ಎ 1 ಜಮೀನನ್ನು 2 ಮತ್ತು 3 ನೇ ಪ್ರತಿವಾದಿಯರು ಭಗರ್ ಹುಕುಂ ಅಡಿಯಲ್ಲಿ ವಹಿವಾಟು ಮಾಡುತ್ತಿದ್ದು ಅದರಂತೆ ಸದರ ಜಮೀನು 2 ಮತ್ತು 3 ನೇ ಪ್ರತಿವಾದಿಯರಿಗೆ ಮಂಜೂರಾಗಿರುತ್ತದೆ. ಅ ಸಮಯದಲ್ಲಿ ನಿಂಗಪ್ಪ ಎಂಬುವರು ಕೂಡ ಸದರಿ ಜಮೀನನ್ನು ಸಾಮೂಹಿಕವಾಗಿ ವಹಿವಾಟು ಮಾಡುತ್ತಿದ್ದರು ಎಂದರೆ ಇರಬಹುದು. ಆ ರೀತಿ 2 ಮತ್ತು 3 ನೇ

ಪ್ರತಿವಾದಿಯರಿಗೆ ದಾವಾ ಆಸ್ತಿ ಸರ್ವೆನಂ. 60/5 ಎ 1 ಮಂಜೂರಾದ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಆ ರೀತಿ ಜಮೀನು ಮಂಜೂರಾಗುವಾಗ ಆಫ್ ಸೆಟ್ ಪ್ರೈಸ್ ಹಣ 274/-ರೂಗಳನ್ನು ತುಂಬಿದ್ದು ಅದನ್ನು ಯಾರು ತುಂಬಿದ್ದಾರೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆನಂ. 60/6 ಬಿ ಆಸ್ತಿಯನ್ನು 2 ಮತ್ತು 3 ನೇ ಪ್ರತಿವಾದಿಯರು ಖರೀದಿ ಹಿಡಿದಿರುತ್ತಾರೆ. ಸದರಿ ಖರೀದಿ ಪತ್ರಕ್ಕೆ ನಾನು ಸಾಕ್ಷ್ಯದಾರನಾಗಿರುವುದಿಲ್ಲ. ಸದರಿ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ನಾನು ನನ್ನ ಸಾಕ್ಷ ಪ್ರಮಾಣದಲ್ಲಿ ಹೇಳಿರುವಂತೆ 2 ಮತ್ತು 3 ನೇ ಪ್ರತಿವಾದಿಯರು ದಾವೆಯ 2 ನೇ ಆಸ್ತಿಯನ್ನು ಖರೀದಿ ಮಾಡಿದ್ದು ಅದನ್ನು ನಿಂಗಪ್ಪ ರವರ ಹೆಸರಿಗೆ ಖರೀದಿ ಪತ್ರ ನೋಂದು ಮಾಡಿಸಿರುತ್ತಾರೆ ಎಂದು ಹೇಳಿರುವುದು ನಿಜ ಇರುತ್ತದೆ.

4. ದಾವಾ ಆಸ್ತಿಗಳ ಉತ್ತರ ಭಾಗಕ್ಕೆ ನನ್ನ ಜಮೀನು ಇದಿದ್ದು ಅದರ ಕ್ಷೇತ್ರ 6 ಎಕರೆ ಇರುತ್ತದೆ. ನಮ್ಮ ಮನೆತನದ ಜವಾಬ್ದಾರಿಯನ್ನು ಹಾಗೂ ಕೃಷಿ ಜವಾಬ್ದಾರಿಯನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. 2 ಮತ್ತು 3 ನೇ ಪ್ರತಿವಾದಿಯರು ನಮ್ಮ ಊರಿನಲ್ಲಿಯೇ ವಾಸವಾಗಿದ್ದು, ನಿಂಗಪ್ಪ ಎಂಬುವವರು ಆಗಾಗ ನಮ್ಮ ಊರಿಗೆ ಬೇಟಿ ನೀಡುತ್ತಿದ್ದರು. ಆಗ 2 ಮತ್ತು 3 ನೇ ಪ್ರತಿವಾದಿಯರು ಹಾಗೂ ನಿಂಗಪ್ಪ ಎಂಬುವರು 3 ಜನ ಸೇರಿ ಜಂಟಿಯಾಗಿ ವಹಿವಾಟು ಮಾಡುತ್ತಿದ್ದರು ಎಂದರೆ ಇರಬಹದು. ಆದರೆ ಆ ಬಗ್ಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರು ಈಗಲೂ ಕೂಡ ಒಟ್ಟು ಕುಟುಂಬದಲ್ಲಿಯೇ ಇರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿಯರು ಕೂಡಿ ಸಾಮೂಹಿಕವಾಗಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಇರಬಹದು ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಅ ಕಾರಣದಿಂದ ವಾದಿಗೆ ದಾವಾ ಆಸ್ತಿಗಳಲ್ಲಿ ಸಮನಾದ ಹಕ್ಕು ಇದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.